**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ. ಸಿ.ಸಿ ನಂ.181/2023.**

ಪಿರ್ಯಾದುದಾರರುಃ- ಸಾಮರಸ್ಯ ಪತ್ತಿನ ಸೌಹಾರ್ದ ಸಹಕಾರಿ ಸಂಘ (ಲಿ).,
ರಥಬೀದಿ ಹೊನ್ನಾವರ ,
ಪ್ರತಿನಿಧಿಸುವವರು,
ರಾಘವೇಂದ್ರ ಸುಬ್ರಾಯ ನಾಯ್ಕ,
ವಯಸ್ಸು ಸುಮಾರುಃ- 41 ವರ್ಷ,
ಮುಖ್ಯ ಕಾರ್ಯನಿರ್ವಾಹಕರು,
ತಾಲೂಕುಃ- ಹೊನ್ನಾವರ (ಉ.ಕ).

**-ವಿರುದ್ಧ-**

ಆರೋಪಿಯ ಹೆಸರುಃ- ಐಶಾ ಜುಬೇರ್ ಸಾಬ್,
ವಯಸ್ಸು ಸುಮಾರುಃ- 42 ವರ್ಷ,
ಸಾಕೀನಃ- ಟೊಂಕಾ-1,
ಅಂಚೆಃ- ಕಾಸರಕೋಡ,
ತಾಲೂಕುಃ- ಹೊನ್ನಾವರ (ಉ.ಕ).

**ಆಪಾದನೆ**

ಶ್ರೀ ಈರಣ್ಣ ಹುಣಶಿಕಟ್ಟಿ, ಬಿ.ಕಾಂ., ಎಲ್.ಎಲ್.ಬಿ., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡ ಆಪಾದನೆ ಹೊರಿಸುತ್ತಿದ್ದೇನೆ.

ಪಿರ್ಯಾದಿ ಸಂಸ್ಥೆಯಲ್ಲಿ ಶ್ರೀಮತಿ ನೂರ್ ಜಹಾನ್ ಬೇಗಂ ಶಂಶೂದ್ದೀನ್ ರವರು ರೂ.35,000/- ಸಾಲವನ್ನು ಪಡೆದುಕೊಂಡಿದ್ದು, ಸದರಿ ಸಾಲಕ್ಕೆ ಆರೋಪಿಯಾದ ನೀವು ಜಾಮೀನುದಾರರಾಗಿದ್ದು, ಸದರಿ ಸಾಲದ ಹಣವನ್ನು ಮರುಪಾವತಿಸುವ ಸಲುವಾಗಿ ನೀವು ಪಿರ್ಯಾದಿ ಸಂಸ್ಥೆಯ ಹೆಸರಿಗೆ ನಿಮ್ಮ ಬ್ಯಾಂಕ್ ಖಾತೆಯುಳ್ಳ **ಬ್ಯಾಂಕ್ ಆಫ್ ಬರೋಡಾ., ಹೊನ್ನಾವರ** ಶಾಖೆಯ ಚೆಕ್ ನಂ.002372 ನ್ನು ದಿನಾಂಕ 23-12-2022, ರೂ.35,000/- ಎಂದು ನಮೂದಿಸಿ ಚೆಕ್ ಗೆ ಸಹಿ ಮಾಡಿಕೊಟ್ಟು, ಸದರಿ ಚೆಕ್ ನ್ನು ಬ್ಯಾಂಕ್ ಗೆ ನಗದೀಕರಿಸಲು ಹಾಜರುಪಡಿಸಿದ ಕೂಡಲೇ ಹಣ ಸಿಗುತ್ತದೆ ಎಂಬ ಭರವಸೆಯನ್ನು ನೀಡಿದ್ದು ಇರುತ್ತದೆ. ಅದರಂತೆ ಪಿರ್ಯಾದಿಯವರು ನಗದೀಕರಿಸುವ ಸಲುವಾಗಿ ಸದರಿ ಚೆಕನ್ನು ಅವರ ಸಂಸ್ಥೆಯ ಖಾತೆಯಿರುವ **ಕೆ.ಡಿ.ಸಿ.ಸಿ., ಬ್ಯಾಂಕ್., ಹೊನ್ನಾವರ** ಶಾಖೆಯಲ್ಲಿ ಹಾಜರುಪಡಿಸಿದಾಗ, ಸದರಿ ಬ್ಯಾಂಕ್ ನವರು, "ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣವಿರುವುದಿಲ್ಲವೆಂದು" ಎಂದು ತಿಳಿಸಿ ಸದರಿ ಚೆಕನ್ನು ದಿನಾಂಕ 30-12-2022 ರಂದು

ಮೆಮೋದೊಂದಿಗೆ ವಾಪಾಸ್ ನೀಡಿರುತ್ತಾರೆ. ಈ ಕುರಿತು ಪಿರ್ಯಾದಿಯವರು ನಿಮಗೆ ವಕೀಲರ ಮೂಲಕ ದಿನಾಂಕ 18-01-2023 ರಂದು ರಿಜಿಸ್ಟರ್ ನೋಟಿಸ್ ಕಳುಹಿಸಿದ್ದು, ಸದರಿ ನೋಟಿಸ್ ದಿನಾಂಕ 20-01-2023 ರಂದು ಜಾರಿಯಾಗಿದ್ದರೂ ಸಹ ನೀವು ಸದರಿ ಚೆಕ್ ನಲ್ಲಿ ನಮೂದಿಸಿದ ಹಣವನ್ನು ಸಹ ನೀಡದೇ ನೆಗೋಶಿಯೆಬಲ್ ಇನ್ ಸ್ಟ್ರುಮೆಂಟ್ ಕಾಯಿದೆ ಕಲಂ. 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಪ್ರಶ್ನೆ1: ಈಗ ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೇ?

ಆರೋಪಿಯ ಉತ್ತರ : ತಿಳಿಯಿತು.

ಪ್ರಶ್ನೆ2: ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ?

ಆರೋಪಿಯ ಉತ್ತರ : ವಿಚಾರಣೆಯಾಗಬೇಕು.

(ಈ ಮೂಲಕ ಪ್ರಮಾಣಿಸುವುದೇನೆಂದರೆ ಆರೋಪಿಯು ಕೊಟ್ಟಂತ ಹೇಳಿಕೆಯ ಉತ್ತರವನ್ನು ಪಡೆಯಲಾಗಿದೆ )

ಸಹಿ ಇದೆ.

**ದಿನಾಂಕಃ- 29-09-2025.**

**(ಈರಣ್ಣ ಹುಣಶಿಕಟ್ಟಿ).,**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಮ್.ಎಫ್.ಸಿ., ಹೊನ್ನಾವರ.**

ಆರೋಪಿಯ ಸಹಿಃ- ಸಹಿ ಇದೆ.

****